ಊ) ಸಮಿತಿ ಇವುಗಳಿಗೆ ಶಾಲಾ ಕೊಠಡಿ ಕಟ್ಟಲು ಕೊಠಡಿ ಒಂದಕ್ಕೆ ಸಾಮಾನ್ಯ ಯೋಜನೆಯಲ್ಲಿ ೬೦೦೦ ರೂ.ಗಳಂತೆಯೂ ಎಸ್‌ಸಿ ವಿಶೇಷ ಯೋಜನೆಯಲ್ಲಿ ೧೨,೦೦೦ ರೂ.ಗಳನ್ನು ಅನುದಾನ ನೀಡಲಾಗುವುದು (ಎಸ್.ಆರ್.ಇ.ಪಿ.ಯಲ್ಲಿ ಪ್ರತಿ ಕೊಠಡಿಗೆ ೧೨,೦೦೦ ರೂ.ಗಳನ್ನು ಮೀಚ್ಚ ಮಾಡಬಹುದು ಇವೆಲ್ಲ ಯೋಜನೆಗಳ ಪ್ರಯೋಜನ ಪಡೆದುಕೊಂಡು ಹಂತ ಹಂತವಾಗಿ ಈ ವರ್ಷದಿಂದಲೇ ಅವಶ್ಯಕ ಕೊಠಡಿಗಳ ನಿರ್ಮಾಣ ಮಾಡಲಾಗುವುದು.

ಶ್ರೀ ಜಿ.ಎಸ್. ಬಸವರಾಜು.—ಅಧ್ಯಕ್ಷರೇ, (ಅ) ಪ್ರಶ್ನೆಗೆ ಉತ್ತರವಾಗಿ ೧೬೪ ಕಿರಿಯ ಪ್ರಾಥಮಿಕ ಶಾಲೆಗಳು ಮತ್ತು ೭೧ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸರ್ಕಾರದ ಪರವಿಯಿಂದ ಕಟ್ಟಡಗಳನ್ನು ಒದಗಿಸಲಾಗಿದೆ ಎಂದು ಹೇಳಿದ್ದಿರಿ. ಅರಸೀಕೆರೆ ತಾಲ್ಲೂಕಿನಾದ್ಯಂತ ಪ್ರತಿಯೊಂದು ಸಂತಶಾಲೆಯನ್ನೂ ನಾನು ನೋಡಿಕೊಂಡು ಬಂದಿದ್ದೇನೆ. ಈಗ ಇರತಕ್ಕಂಥ ಪರಿಸ್ಥಿತಿಯಲ್ಲಿ ಮುಂದುವರೆದರೆ, ಮೊನ್ನೆತಾನೆ ಕಟ್ಟಡ ಕುಸಿದು ದುರಂತ ಸಂಭವಿಸಿದಂತೆ, ಸುಮಾರು ೨೫೦–೩೦ ಶಾಲಾ ಕಟ್ಟಡಗಳು ಕುಸಿದು ಶಾಲಾ ಮಕ್ಕಳು ಸಾವನ್ನಪ್ಪಂತಹ ಪರಿಸ್ಥಿತಿ ಇದೆ. ಹಿಂದೆ ಪಾವಗಡದಲ್ಲಿ ಈ ರೀತಿ ಆಗಿದ್ದನ್ನು ನೋಡಿದ್ದೇವೆ. ಆದ್ದರಿಂದ ದಯವಮಾಡಿ ಸರ್ಕಾರದವರು ಪಾವಗಡದಲ್ಲಿ ಸೂಕ್ತ ಕ್ರಮ ಕೈಗೊಂಡ ರೀತಿಯಲ್ಲಿ ಕೂಡಲೇ ಇಲ್ಲಿ ಸಾಯತಕ್ಕಂಥ ಮಕ್ಕಳನ್ನು ಬದುಕಿಸ ಬೇಕೆಂದು ಆ ಕ್ಷೇತ್ರದ ಪರವಾಗಿ ತಮ್ಮ ಮುಖಾಂತರ ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ.—ಸ್ಥಳೀಯ ಶಾಸಕರು ಬಹಳ ಪ್ರಭಾವಿತರಾಗಿದ್ದಾರೆ. ಮುನಿಸಿಪಾಲಿಟಿ ಪ್ರದೇಶಗಳಲ್ಲಿ ಕಟ್ಟಡ ಕಟ್ಟುವುದಕ್ಕೆ ಪುರಸಭೆಯ ಒಂದು ಭಾಗ ಕೊಡುವ ವ್ಯವಸ್ಥೆ ಮಾಡಿದ್ದೇವೆ. ವಿಶೇಷವಾಗಿ ಬಿದ್ದು ಹೋಗಿರತಕ್ಕಂಥ ಕಟ್ಟಡಗಳಿಗೆ ದುರಸ್ತಿ ಮಾಡಲು ಮತ್ತು ಶಾಲಾ ಕಟ್ಟಡಗಳನ್ನು ಕಟ್ಟಲು ಜೊಸದಾಗಿ ತೊಂಬತ್ತು ಲಕ್ಷ ರೂಪಾಯಿಂಗಳನ್ನು ಇಟ್ಟಿದ್ದೇವೆ. ಈ ದೃಷ್ಟಿಯಿಂದ ಈ ಕ್ಷೇತ್ರದಲ್ಲಿ ಬಿದ್ದು ಹೋಗಿರುವಂತಹ ಕಟ್ಟಡದ ದುರಸ್ತಿಗೆ ವ್ಯವಸ್ಥೆಯನ್ನು ಮಾಡಲಾಗುವುದು.

ಒಬ್ಬರು ಮಾನ್ಯ ಸದಸ್ಯರು.—ಸರ್ಕಾರದ ಅನುದಾನ ಪಡೆಯುವ ಸ್ಥಳೀಯ ಸಂಸ್ಥೆಗಳು ಕಟ್ಟಡ ಕಟ್ಟಬೇಕಾದರೆ ಸಾಮಾನ್ಯ ಯೋಜನೆಯಲ್ಲಿ ಒಂದು ಕೊಠಡಿಗೆ ಆರು ಸಾವಿರ ರೂಪಾಯಿಗಳು ಮತ್ತು ವಿಶೇಷ ಯೋಜನೆಯಲ್ಲಿ ಹನ್ನೆರಡು ಸಾವಿರ ರೂಪಾಯಿಗಳನ್ನು ನೀಡಲಾಗುವುದು ಎಂದು ಹೇಳಿದ್ದಿರಿ. ಆರು ಸಾವಿರ ಇದ್ದುದನ್ನು ಪತ್ತು ಸಾವಿರಕ್ಕೆ ಏರಿಸಲು ಸರ್ಕಾರಕ್ಕೆ ಇರುವ ತೊಂದರೆಯಾದರೂ ಏನು ?

ಶ್ರೀ ಬಿ. ರಾಚಯ್ಯ.—ಇದನ್ನು ಪರಿಶೀಲಿಸುತ್ತೇನೆ.

ರೈತರು ಬೆಳೆದ ಹುಟ್ಟುವಳಿ ದಾಸ್ತಾನಿನ ಮೇಲೆ ಲೆವಿಯ ವಿನಾಯಿತಿ

೩೭೫ (೨೪೪) ಶ್ರೀ ಎಫ್. ಎ. ಕೊಪ್ಪದ್ (ರಾಮದುರ್ಗ).—ವ್ಯವಸಾಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

ಅ) ರೈತರು ತಮ್ಮ ಸ್ವಂತ ಜಮೀನಿನಲ್ಲಿ ಬೆಳೆದ ಲೆವಿ ಇಲ್ಲದ ಹುಟ್ಟುವಳಿ ದಾಸ್ತಾನು ಮಾಡಲು ಏನಾದರೂ ಸರ್ಕಾರದ ನಿರ್ಬಂಧವೇನಾದರೂ ಇದೆಯೆ ?

ಆ) ಹಾಗಿದ್ದಲ್ಲಿ ಯಾವ ಬೆಳಗಳಿಗೆ ?

ಶ್ರೀ ಎಫ್.ಎ. ಕೊಪ್ಪದ.—ಹೈಬ್ರೆಡ್ ಜೋಳವನ್ನು ಮಾರಲಿಕ್ಕೆ ಹೋದರೆ ಪರ್ಮಿಟ್ ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ. ಇದನ್ನು ದಾಸ್ತಾನು ಮಾಡಲು ಸರ್ಕಾರದ ನಿರ್ಬಂಧವಿದೆಯೆಂದು ಕೇಳಿದ್ದೇವೆ. ಇದನ್ನು ಮಾರುವುದರ ಬಗ್ಗೆ ಯಾವುದೇ ವ್ಯವಸ್ಥೆ ಮಾಡದೇ ಇರುವುದರಿಂದ ರೈತರು ನಷ್ಟವನ್ನು ಅನುಭವಿಸುತ್ತಿದ್ದಾರೆ.

ಶ್ರೀ ಜಿ. ಬಸವಣ್ಣಪ್ಪ.—ಈಗಿನ ಕಾನೂನು ಪ್ರಕಾರ ಲೆವಿ ಪದ್ಧತಿ ಬತ್ತ ಅಕ್ಕಿಗೆ ಮಾತ್ರ ಸೀಮಿತವಾಗಿದೆ. ಜೋಳಕ್ಕೆ ಯಾವ ನಿರ್ಬಂಧವೂ ಇಲ್ಲ. ಆದರೆ ೨೫ ಕ್ವಿಂಟಾಲ್‌ಗಿಂತ ಹೆಚ್ಚು ಜೋಳವನ್ನು ಇಟ್ಟುಕೊಂಡರೆ ಆ ಬಗ್ಗೆ ಘೋಷಣೆ ಮಾಡಬೇಕಾಗುತ್ತದೆ.

ಶ್ರೀ ಎಫ್.ಎ. ಕೊಪ್ಪದ.—೨೫ ಕ್ವಿಂಟಾಲ್‌ಗಿಂತ ಹೆಚ್ಚು ಜೋಳವನ್ನು ಕೂಲಿಗಾಗಿ ಕೊಡುತ್ತೇನೆ. ನಮ್ಮ ಕಡೆ ಕೂಲಿಗೆ ರೊಕ್ಕ ಕೊಡುವುದಿಲ್ಲ.

ಶ್ರೀ ಜಿ. ಬಸವಣ್ಣಪ್ಪ.—ಇದನ್ನು ಪರಿಶೀಲಿಸುತ್ತೇನೆ.

ಶ್ರೀ ಎಂ. ಎಂ. ನಡಾಫ್.—ಹೈಬ್ರಿಡ್ ಜೋಳವನ್ನು ಬಹಳಷ್ಟು ಕಾಲ ಇಡಲಿಕ್ಕೆ ಬರುವುದಿಲ್ಲ ಇದನ್ನು ಮಾರುವುದರ ಬಗ್ಗೆ ಏನು ವ್ಯವಸ್ಥೆ ಮಾಡಿದ್ದೀರಿ ಎಂಬುದು ಶ್ರೀ ಕೊಪ್ಪದ್ ಅವರ ಸಂಕಟ. ಇದಕ್ಕೆ ತಾವು ನೇರವಾಗಿ ಉತ್ತರ ಕೊಡಬೇಕು.

ಶ್ರೀ ಜಿ. ಬಸವಣ್ಣಪ್ಪ.—ಇದನ್ನು ಮಾರುವುದಕ್ಕೆ ಯಾವ ಕಂಡೀಷನ್ನೂ ಇಲ್ಲ.

Incharge arrangements under Rule 32 of K.C.S.R.

376 (96) Dr. Heggappa Desappa Lamani (Bydgi).—Will the Minister for Education be pleased to State:—

a) Whether it has come to the notice of the Government that the Officers of Education Department are placed inchrge of the current duties of vacant post in terms of Rule 32 of K.C.S.Rs.

b) If so, the number of such Officers;

c) The number of years from which these Officers are working as such;

d) The hardship caused to Government in appointing them on officiating basis;

e) When these officers would be appointed on officiating basis ?

Sri. B. Rachaiah (Minister for Education).—

a) Yes.

b) Department of Public Instruction: 712

Technical Education: 39

c) Department of public Instuction: 1971 onwards

Technical Education: 1980 onwards

d) Department of Public Instuction.: Due to delay in finalisation of Gradation lists of Secondary School Assistants Officiating promotion is delayed.

Technical Education: Due to review of promotion from 1-11-56 and finalisation of Cadre and Recruitment Rules in respect of some cadres.

e) It is under consideration of Government and decision will be taken early.